ಆಯಿತು. 'ನೋ ಮೊಬೈಲ್ ಫೋನ್' ಎಂಬ ಅನೌನ್ಸ್‌ಮೆಂಟ್ ಆರಂಭವಾಯಿತು.

'ನಾನು ನಿಮ್ಮ ಮಗಳು, ಡ್ಯಾಡ್' – ಎಂದು ರಾಬರ್ಟ್‌ನ ಮಗಳು ಅವನಿಗೆ ಹೇಳುವ ಅವಶ್ಯಕತೆ ಬರುವುದಿಲ್ಲ.

ನಾನು ಪ್ರಯಾಣಿಸುತ್ತಾ ಹದಿನೆಂಟು ಗಂಟೆಗಳು ಸಂದಿವೆ. ನಾನು ಐವತ್ತಾರು ಕಿ.ಮೀ. ನಡೆದಿದ್ದೇನೆ. ಕಾಲುಗಳು ತುಂಬಾ ದಣಿದಿವೆ. ಇನ್ನೂ ಐವತ್ತೆರಡು ಕಿ.ಮೀ. ಪ್ರಯಾಣಿಸಬೇಕಿದೆ. ಪ್ರಯಾಣದ ಮುಂದಿನ ಹಂತ ರಿಸ್ಗಸ್ತೇದ್ ಬಂದಿದೆ. ರಾತ್ರಿಯ ಒಂದು ಗಂಟೆಯಾಗಿದೆ. ಎಲ್ಲೆಲ್ಲೂ ಶೂನ್ಯ ಅಂಧಕಾರ ಕವಿದಿದೆ. ಮೈ ನಡುಗಿಸುವ ಚಳಿ. ಭೂಮಿ ಮಂಜಿನ ಶಿಲೆಯಲ್ಲಿ ಬದಲಾಗುತ್ತಿದೆ. ಆ ವೃದ್ಧನಿಗೆ ನನ್ನ ಸ್ವೆಟರ್ ದಾನವಾಗಿ ಕೊಟ್ಟಿದ್ದು, ಈಗ ಅದರ ತಪ್ಪಿನ ಅರಿವಾಗುತ್ತಿದೆ. ಆದರೆ ಒಂದು ವೇಳೆ ನಾನು ಅವನಿಗೆ ನನ್ನ ಸ್ವೆಟರ್ ದಾನವಾಗಿ ಕೊಡದಿದ್ದಲ್ಲಿ ಅದು ನನ್ನ ಬ್ಯಾಗಿನಲ್ಲಿರುತ್ತಿತ್ತು; ಆ ಬ್ಯಾಗ್ ಕಳ್ಳತನವಾಯಿತು. ವೃದ್ಧನಿಗೆ ಸ್ವೆಟರ್ ಕೊಟ್ಟಿದ್ದು ಸರಿಯೆನಿಸಿತು, ಇಲ್ಲದಿದ್ದಲ್ಲಿ ಅದೂ ಕಳ್ಳತನವಾಗುತ್ತಿತ್ತು. ಡೆನ್ಮಾರ್ಕ್ ಸುರಕ್ಷಿತ ಸ್ಥಳವೆಂಬ ನನ್ನ ಭಾವನೆಗೆ ಪೆಟ್ಟು ಬಿತ್ತು. 'ಇಂದಿನ ಕಾಲದಲ್ಲಿ ಯಾರನ್ನೂ ಪೂರ್ಣವಾಗಿ ನಂಬಬಾರದು, ನೀವು ಎಚ್ಚರಿಕೆಯಿಂದ ಇರಬೇಕು' – ಎಂದು ಆ ಯುವತಿ ಸರಿಯಾಗಿಯೇ ಹೇಳಿದ್ದಳು.

ಸಮುದ್ರ, ಕೆರೆ, ಕಾಡು, ನಿಶ್ಶಬ್ದ. ಈ ಕಾಡು ಮಾರ್ಗ ನೋಡಿ ಭಯವಾಗುತ್ತಿದೆ. ಹೀಗಾಗಿ ನಾನು ಕಾಲು ಹಾದಿಯಲ್ಲಿ ಸಾಗದೆ ಕಾಂಕ್ರೀಟಿನ ರಸ್ತೆಯಲ್ಲಿ ಹೋಗಲು ಪ್ರಯತ್ನಿಸುತ್ತಿದ್ದೇನೆ. ಈಗ ಹೈವೇಗೆ ಬಂದಿದ್ದೇನೆ. ನನಗೆ ಲಿಫ್ಟ್ ಬೇಕಾ ಎಂದು ಕೇಳಲೋಸುಗ ಕೆಲವು ವಾಹನಗಳು ನನ್ನ ಸಮೀಪಕ್ಕೆ ಬಂದು ನಿಲ್ಲುತ್ತಿವೆ.

'ಬೇಡ ಥಕ್ಕ! (ನೋ ಥ್ಯಾಂಕ್ಸ್)' ಎನ್ನುತ್ತಾ ಮುಂದುವರೆಯುತ್ತಿದ್ದೇನೆ. ಆದರೂ ಒಂದು ಕಾರಿನ ಹೆಡ್‌ಲೈಟ್ ಮಿನುಗಿತು, ಅದು ನಿಧಾನವಾಗಿ ಬಂದು ನನ್ನ ಬಳಿ ನಿಂತಿತು. ಕಾರಿನ ಗ್ಲಾಸನ್ನು ಕೆಳಗಿಳಿಸಿ ಡ್ರೈವರ್ ಕೇಳಿದ, 'ನಿಮ್ಮನ್ನು ಎಲ್ಲಿಗೆ ಬಿಡಲಿ?'

'ನೋ ಥ್ಯಾಂಕ್ಯೂ. ನಾನು ಕಾಲ್ನಡಿಗೆಯಲ್ಲಿಯೇ ಹೋಗಲು ಬಯಸುತ್ತೇನೆ' ಎಂದೆ. ಆ ವ್ಯಕ್ತಿ ನನಗೆ ಪರಿಚಿತನಂತೆ ಕಂಡ. ಇವನನ್ನು ಎಲ್ಲಿ ನೋಡಿದ್ದೆ? ಎಂದು ಯೋಚಿಸಿದೆ. ಅವನು ಕಾರಿನ ಗ್ಲಾಸನ್ನು ಮುಚ್ಚಿ ಮುಂದಕ್ಕೆ ಹೋದಾಗ ತಕ್ಷಣ ಕೂಗಿದೆ,

'ಹಲೋ... ಹಲ್ಲೋ...' ಕಾರು ನಿಂತಿತು. ಕಾರಿನ ಸಮೀಪಕ್ಕೆ ಹೋಗಿ ಒಳಗೆ ಕೂತಿದ್ದವರನ್ನು ತದೇಕಚಿತ್ತದಿಂದ ನೋಡಿದೆ; ಎಲ್ಲರೂ ಯುವಕರಾಗಿದ್ದರು. ನೋಡಿದ ಮುಖಗಳು. ಇವರನ್ನು ಎಲ್ಲಿ ನೋಡಿದ್ದೆ?

'ನಾನು ಬಹುಶಃ ನಿಮ್ಮನ್ನೆಲ್ಲೋ ಭೇಟಿಯಾಗಿದ್ದೇನೆ.'

ಕಾರಿನಲ್ಲಿ ಕೂತಿದ್ದ ಯುವಕನೊಬ್ಬ ನೆನಪಿಸುತ್ತಾ ಹೇಳಿದ, 'ರೋಸಕಿಲ್ಡೆಯ ಟ್ರಾಂಕ್ಬಾರ್ ರೆಸ್ಟೋರೆಂಟಿನಲ್ಲಿ ನಾವು ಭೇಟಿಯಾಗಿದ್ದೆವು'.

ನನ್ನ ಸಂದರ್ಶನ ಪಡೆದಿದ್ದವರ ಬಳಿ ಈ ಯುವಕ ಸಹ ಕೂತಿದ್ದ.

## ಕಳೆದ ಸಂಚಿಕೆಯಲ್ಲಿ



ಗ್ಲಾಸ್ಗೋದಲ್ಲಿ ವಂಶಪಾರಂಪರ್ಯವಾಗಿ ಬಂದ ಮನೆಯೊಂದರಲ್ಲಿ ಅಮ್ಮ ವಾಸಿಸುತ್ತಿದ್ದಳು. ಅಮ್ಮ ಏಸುವಿನ ಭಕ್ತಳಾಗಿದ್ದಳು. ಸೌಂದ್ರಾ ಮತ್ತು ನೀನಾಳಿಂದ ದೂರವಾದ ನಂತರ ಅಮ್ಮನ ಮಡಿಲನ್ನು ನೆಮ್ಮದಿಯ ಮರುಕಳಿಕೆಗೆ ಅವಲಂಬಿಸುವುದು ಪಾಲ್‌ಗೆ ಅನಿವಾರ್ಯವಾಯಿತು. ಎಪ್ಪತ್ತೈದರ ವಯಸ್ಸಿನಲ್ಲೂ ಅಮ್ಮ ಕ್ರಿಯಾಶೀಲಳಾಗಿದ್ದಳು. ಮನೆಯ ಕೆಲಸಗಳ ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲೂ ನಿರತಳಾಗಿದ್ದಳು. ತನ್ನ ಸಹಮನಸ್ಕ ಗೆಳತಿಯರೊಂದಿಗೆ ಕಾರ್ಯಕ್ರಮಗಳಿಗಾಗಿ ಓಡಾಡುತ್ತಿದ್ದಳು. ಅಮ್ಮನ ಜೀವನೋತ್ಸಾಹ ನೋಡಿ ಪಾಲ್ ಚಕಿತನಾದ. ಅಮ್ಮನಿಂದ ಬೀಳ್ಕೊಂಡು ಹೊರಡುವಾಗ, ಪಾಲ್ ಎದುರು ಹೊಸ ಸಂಬಂಧದ ಪ್ರಸ್ತಾಪವಾಯಿತು. ಯಾವ ಹೆಣ್ಣಿನೊಂದಿಗೂ ಬಾಳುವುದು ತನ್ನಿಂದ ಸಾಧ್ಯವಿಲ್ಲ ಎಂದುಕೊಂಡಿದ್ದ ಪಾಲ್, ಅಮ್ಮನ ಮಾತಿನಿಂದ ಉತ್ತೇಜಿತನಾದ. ಮತ್ತೆ ರಜೆಯಲ್ಲಿ ಬಂದಾಗ ಅಮ್ಮ ತೋರುವ ಸಂಬಂಧವನ್ನು ಪರಿಶೀಲಿಸುವುದಾಗಿ ಹೇಳಿದ. ಈಗ ನೆನಪುಗಳ ದಾರಿಯಲ್ಲಿ ನಡೆಯುತ್ತಿದ್ದ ಪಾಲ್‌ಗೆ ಅಮ್ಮನ ನೆನಪು ಕಾಡತೊಡಗಿತು. ಅದೇ ವೇಳೆಗೆ ಫೋನ್ ಮಾಡಿದ ತಾಯಿ, ಮಗನ ದುರವಸ್ಥೆ ತಿಳಿದು ಸಂಕಟಪಟಪಟ್ಟಳು. ಈ ಕೆಟ್ಟ ಸ್ಥಿತಿಯಿಂದ ಏಸು ಕಾಪಾಡುವುದಾಗಿ ಧೈರ್ಯ ತುಂಬಿದಳು.

'ನೀವೆಲ್ಲಾ ಈಗ ರಸ್ತೆಯಲ್ಲಿ ಏನು ಮಾಡುತ್ತಿದ್ದೀರಿ?' ನಾನು ಪ್ರಶ್ನಿಸಿದೆ.

'ನಿಮ್ಮನ್ನು ಹಿಂಬಾಲಿಸುತ್ತಿದ್ದೇವೆ'.

'ನನ್ನನ್ನು ಹಿಂಬಾಲಿಸುತ್ತಿದ್ದೀರ, ಏಕೆ?'

'ನೀವು ವಾಸ್ತವವಾಗಿ ಪಾದಯಾತ್ರೆಯನ್ನು ಮಾಡುತ್ತಿದ್ದೀರೋ ಅಥವಾ ಬುರುಡೆ ಬಿಡ್ತಿದ್ದೀರೋ ಎಂದು ನೋಡಲೋಸುಗ.'

'ನಾನು ಯಾವ ಯಾವ ಮಾರ್ಗದಲ್ಲಿ ಹೋಗುತ್ತೇನೆ ಎಂಬುದು ನಿಮಗೆ ಹೇಗೆ ತಿಳಿಯಿತು?'

ಅವರು ತಮ್ಮ ಐಫೋನ್‌ನಲ್ಲಿ ನನ್ನ ಪಾದಯಾತ್ರೆಯ ಬಗ್ಗೆ ತೆಗೆದ ನಕ್ಷೆಯ ಫೋಟೊ ತೋರಿಸುತ್ತಾ ಹೇಳಿದರು, 'ಇದರಿಂದ ತಿಳೀತು.'

ನನಗೆ ಆಶ್ಚರ್ಯವಾಯಿತು. ಅವರು ನನ್ನನ್ನು ಪ್ರಶಂಸಿಸುತ್ತಾ ಹೇಳಿದರು, 'ನೀವು ಉತ್ತಮ ನಕ್ಷೆಯನ್ನು ಹಾಕಿದ್ದೀರಿ. ನಕ್ಷೆ ತುಂಬಾ ಸರಿಯಿದೆ. ನಿಮ್ಮಲ್ಲಿ ಧೈರ್ಯ ಮತ್ತು ಭಾವನೆಗಳಿವೆ. ಹ್ಯಾಪಿ ಪಿಲ್‌ಗ್ರಿಮೇಜ್!'

ಅವರು ನನಗೆ ಶುಭ ಕೋರಿ ಮುಂದುವರೆದು ಹೋದರು. ನಾನು ನಿಂತಲ್ಲೇ ನಿಂತೆ.

### ರೋಗಗಳ ರಾಜ - ಕ್ಯಾನ್ಸರ್

ಜೀವನದ ಮೊದಲ ಮತ್ತು ಕೊನೆಯ ಪುಟವನ್ನು ಅಂದರೆ ಹುಟ್ಟು ಮತ್ತು ಸಾವನ್ನು ದೇವರು ತುಂಬಿಸುತ್ತಾನೆ. ಈ ಎರಡರ ನಡುವಿನ ಪುಟಗಳನ್ನು ಪ್ರೀತಿ, ವಿಶ್ವಾಸ, ಸಂಘರ್ಷಗಳಿಂದ ಸ್ವತಃ ಮನುಷ್ಯನೇ ತುಂಬಿಸಬೇಕಾಗುತ್ತದೆ. ನಾನು ಮತ್ತೊಮ್ಮೆ ನನ್ನ ಜೀವನವನ್ನು ಸುಧಾರಿಸಿಕೊಂಡಿದ್ದೆ, ಆದರೆ ಆ ಜೀವನದಲ್ಲಿ ಈಗ ನೀನಾ ಮಾತ್ರ ಇರಲಿಲ್ಲ.

ನಾನು ನನ್ನ ಶಾಲೆಯ ಪಠ್ಯಕ್ರಮ ಸಂಯೋಜಕ ಮತ್ತು ಪರೀಕ್ಷಾ ಸಂಯೋಜಕನಾಗಿ ಹೆಚ್ಚಿನ ಹೊಣೆಯನ್ನು ಹೊತ್ತಿದ್ದೆ; ನನ್ನ ಕೆಲಸದ ಸಮಯವನ್ನು ಸಹ ಹೆಚ್ಚಿಸಿಕೊಂಡಿದ್ದೆ, ಹೀಗಾಗಿ ನನ್ನ ಸಂಬಳದಲ್ಲೂ ಏರಿಕೆಯಾಗಿತ್ತು. ಡೆನ್ಮಾರ್ಕ್‌ನ ಎರಡು ಇಂಟರ್‌ನ್ಯಾಷನಲ್ ಕಂಪನಿಗಳಲ್ಲಿ ಟೂರ್ ಗೈಡ್ ಆಗಿ ಪಾರ್ಟ್‌ಟೈಮ್ ನೌಕರಿಯನ್ನು ಸಹ ಮಾಡುತ್ತಿದ್ದೆ. ಅವರಲ್ಲಿ ಸಮ್ಮೇಳನ ನಡೆದಾಗ, ಹಾಗೂ ಬೇರೆ ದೇಶಗಳಿಂದ ಅಧಿಕಾರಿಗಳು ಸಮ್ಮೇಳನದಲ್ಲಿ ಭಾಗವಹಿಸಲು ಬಂದಾಗ ಅವರಿಗೆ ಗೈಡ್ ಆಗಿ ಅವರನ್ನು ಕೋಪನ್‌ಹೇಗನ್‌ಗೆ ಕರೆದುಕೊಂಡು ಹೋಗುತ್ತಿದ್ದೆ. ಇದರಿಂದ ನನಗೆ ಹೆಚ್ಚಿನ ವರಮಾನ ಲಭ್ಯವಾಗುತ್ತಿತ್ತು. ನನ್ನನ್ನು ಒಂದು ಚರ್ಚ್‌ಗೂ ಅರ್ಪಿಸಿಕೊಂಡಿದ್ದೆ; ಚರ್ಚ್‌ನಲ್ಲಿ ಭಕ್ತಿಭಾವದ ವೃಂದಗಾನಗಳನ್ನು ಪ್ರಸ್ತುತಪಡಿಸುತ್ತಿದ್ದೆ. ಚರ್ಚ್‌ಗೆ ಸಂಬಂಧಿಸಿದ ಇನ್ನಿತರ ಕಾರ್ಯಗಳಲ್ಲೂ ತೊಡಗಿಸಿಕೊಳ್ಳುತ್ತಿದ್ದೆ. ಒಟ್ಟಿನಲ್ಲಿ ಸದಾ ಕಾರ್ಯತತ್ಪರನಾಗಿರುತ್ತಿದ್ದೆ. ಜೀವನ ಸುಖಮಯವಾಗಿರದಿದ್ದಾಗ್ಯೂ ಜೀವನದಲ್ಲಿ ಸಂತುಷ್ಟಿಯಿತ್ತು. ಸ್ಕಾಟ್ಲೆಂಡಿನಲ್ಲೂ ನೌಕರಿಗಾಗಿ ಪ್ರಯತ್ನಿಸುತ್ತಿದ್ದೆ. ಈಗ ಈ ದೇಶದಲ್ಲಿದ್ದು ಏನು ಮಾಡುವುದು, ಯಾರಿಗಾಗಿ ಬಂದಿದ್ದೆನೋ, ಅವಳು ಬೇರೆಯವನ ಪಾಲಾದಳು ಎಂದು ಯೋಚಿಸುತ್ತಿದ್ದೆ.

ನಾನು ನೀನಾಳನ್ನು ಜಾದೂಗಾರಿಣಿ ಎನ್ನುತ್ತಿದ್ದೆ. ಪೀಟರ್ ಒಂದು ಉನ್ನತ ಮತ್ತು ಪ್ರಭಾವಶಾಲಿ ಅಂದರೆ ಡೋಂಗ್ ಎಲರ್ಜಿ ಡೈರೆಕ್ಟರ್ ಹುದ್ದೆಯಲ್ಲಿದ್ದ. ಪೀಟರ್ ನೀನಾ ಬಯಸಿದಂತೆಯೇ ಇದ್ದ. ನೀನಾ ಅವನೊಂದಿಗೆ ಖುಷಿಯಿಂದಲೇ ಇರಬೇಕು. ಅವಳ ಜೀವನ ಅವನೊಂದಿಗೆ ಸಂತಸದಿಂದ ಕಳೆಯುತ್ತಿರಬೇಕು. ಅವರಿಬ್ಬರು ಸೇರಿ ಒಂದು ಹೊಸ ಮನೆಯನ್ನು ಖರೀದಿಸುತ್ತಿದ್ದಾರೆ ಎಂದು ನಮ್ಮ ಕಾಮನ್ ಸ್ನೇಹಿತನೊಬ್ಬ ಹೇಳಿದ. ನೀನಾ ನನ್ನನ್ನು ಇಷ್ಟು ಬೇಗ ಮರೆತಿರುವುದನ್ನು